2019-20

PESIAMS
education for the real world

# INAUGURATION OF CA AND CS FOUNDATION COURSES AT PESIAMS


14-09-2019

PES Institute of Advanced Management Studies had organized the inaugural function of "CS **and CA foundation course"** on 14 September 2019. The program was inaugurated by Shri Shriram Vamsi, Co-founder, Proedge Skill Development and Edutech PVT LTD, Bengaluru. The resource person highlighted discipline as one of the important criterion which the students should maintain throughout their curriculum. The program is designed in a scientific manner with 428 hours, of which 300 hours for discussion and 128 hours for assessment and revision.

On this occasion, he also emphasized to the aspirants of CA and CS course saying that we need to focus upon the improvement of the analytical skills and planning an hour preparation every day for the exam rather than studying for 16 to 18 hours fruitlessly. Finally the resource person opined that failure is not the end but the stepping stone for success as initial failure is a common trend among the aspirants of any competitive exams.

Followed by the presidential address Dr. R.Nagaraja, CCA PES trust guided the young minds by imparting his personal experience about his success which was possible by hard work and never dying spirit of struggle. He also emphasized the point that students should have a balance between their academics as well as CA and CS program and advised them to manage their stress levels. For that they need to have creative thinking, analytical skills, logical reasoning, practicing writing and flexible mindset.

Dr. K. Sailatha, Principal, Dr. Sudharshan G. M., Head, Department of Commerce and Management, faculty members of BCom & BBA Department were also present on this occasion. The program got a devotional beginning with the melodious rendition by Ms. Shwetha L.Ms. Swathi J, Lecturer,welcomed the Guests, Ms. Roopashree gave a closure speech and Ms. Rashmi A. R. anchored the function.





Mr. Nagesh G. P.
IQAC Coordinator

Dr. Sudarshan G. M.
HOD,BBA & B.COM

Head of the Department
Department of BBA & B.Com
PES Institute of Advanced Management Studies
SHIVAMOGGA-577 204.

Dr. K. Sailatha 16/9/2019
Principal

Principal
PES Institute of Advanced Management Studies
NH 206, Sagar Road
SHIVAMOGGA-577 204

Principal
PES Institute of Advanced Management Studies
NH 206, Sagar Road
SHIVAMOGGA-577 204

ಸಂಯುಕ್ತ ಕರ್ನಾಟಕ
ಸೋಮವಾರ, 16, ಸೆಪ್ಟೆಂಬರ್, 2019

PES INSTITUTE OF ADVANCED MANAGEMENT STUDIES * SHIVAMOGGA *

# ಪರೀಕ್ಷೆಯಲ್ಲಿ ತೇರ್ಗಡೆ ಸುಲಭದ ಮಾತಲ್ಲ



ಶಿವಮೊಗ್ಗ: ಪಿಇಎಸ್‌ಐಎಎಂಎಸ್ ಕಾಲೇಜಿನಲ್ಲಿ ಸಿಎ, ಸಿಎಸ್ ಮತ್ತು ಫೌಂಡೇಶನ್ ಕೋರ್ಸ್ ಬೆಂಗಳೂರಿನ ಸ್ಕಿಲ್ ಡೆವಲಪ್‌ಮೆಂಟ್ ಮತ್ತು ಎಡುಟೆಕ್‌ನ ಸಹ ಸಂಸ್ಥಾಪಕ ಶ್ರೀರಾಮ್ ವಂಶಿ ಉದ್ಘಾಟಿಸಿದರು.

ಸಂ.ಕ. ಸಮಾಚಾರ, ಶಿವಮೊಗ್ಗ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಫಲತೆ ಸಾಮಾನ್ಯ. ಮೊದಲ ಪ್ರಯತ್ನದಲ್ಲಿ ಸಿಎ ಹಾಗೂ ಸಿಎಸ್ ನಂತಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಸುಲಭದ ಮಾತಲ್ಲ. ಅಂದ ಮಾತ್ರಕ್ಕೆ ಈ ಕುರಿತು ಹೆದರಿಕೆ ಮತ್ತು ಓಂಜ-ರಿಕೆ ಬೆಳೆಸಿಕೊಳ್ಳುವ ಅಗತ್ಯವಿಲ್ಲ. ಸೋಲಿಗೆ ಧೃತಿಗೆಡದೆ ಸೋಲು ಗೆಲುವಿನ ಸೋಪಾನವಾಗಿ ಮಾಡಿಕೊಳ್ಳಬೇಕೆಂದು ಬೆಂಗಳೂರಿನ ಸ್ಕಿಲ್ ಡೆವಲಪ್‌ಮೆಂಟ್ ಮತ್ತು ಎಡುಟೆಕ್‌ನ ಸಹ ಸಂಸ್ಥಾಪಕ ಶ್ರೀರಾಮ್ ವಂಶಿ ಕಿವಿಮಾತು ಹೇಳಿದರು.

ಭಾನುವಾರ ಇಲ್ಲಿನ ಪಿಎಸ್‌ಐಎಎಂಎಸ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾದ ಸಿಎ, ಸಿಎಸ್ ಮತ್ತು ಫೌಂಡೇಶನ್ ಕೋರ್ಸ್ ಉದ್ಘಾಟಿಸಿ ಮಾತನಾಡಿದ ಅವರು, ಈ ಪರೀಕ್ಷೆಗಳ ಕು-ರಿತಾಗಿ ಯಾವುದೇ ರೀತಿಯ ಗೊಂದಲ ಹಾಗೂ ಅನುಮಾನಗಳಿದ್ದರೆ ನಮ್ಮ ತಜ್ಞ ತರಬೇತುದಾರರು ಅದನ್ನು ನಿವಾರಿಸುತ್ತಾರೆ. ಅಲ್ಲದೇ ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ವಿದ್ಯಾರ್ಥಿಗಳು ವಿಷಯದ ಬಗ್ಗೆ ಯಾವುದೇ ಸಂದೇಹಗಳಿದ್ದಲ್ಲಿ ತರಬೇತುದಾರರನ್ನು ಒಳಗೊಂಡು ಗುಂಪು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳುವುದರ ಜೊತೆಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು ಎಂದರು.

ವಿದ್ಯಾರ್ಥಿಗಳು ಪ್ರತಿ ದಿನ ಕನಿಷ್ಠ ಒಂದು ಗಂಟೆಗಳ ಕಾಲ ಅಧ್ಯಯನ ಮಾಡುವುದರೊಂದಿಗೆ ಗುಣ ಮಟ್ಟದ ಹಾಗೂ ಶಿಸ್ತುಬದ್ಧ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಿಇಎಸ್ ಟ್ರಸ್ಟ್‌ನ ಮುಖ್ಯ ಆಡಳಿತ ಸಂಯೋಜನಾಧಿಕಾರಿ ಡಾ. ಆರ್. ನಾಗರಾಜ್, ಯಶಸ್ಸು ಎಂಬುದು ಸದಾ ಸತತ ಪರಿಶ್ರಮದ ಮೂಲಕ ಲಭಿಸುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಸ್ಫೂರ್ತಿ ಕಳೆದುಕೊಳ್ಳದೆ, ನಿರಂತರ ಪ್ರಯತ್ನವನ್ನು ನಿಲ್ಲಿಸದೆ ತಮ್ಮ ಗು-ರಿಯನ್ನು ಸಾಧಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಶಿಸ್ತುಬದ್ಧ ಅಧ್ಯಯನವನ್ನು ವರ್ಷದ ಉದ್ದಕ್ಕೂ ಅಳವಡಿಸಿಕೊಳ್ಳುವುದು ಬಹಳ ಮುಖ್ಯ. ಈ ತರಗತಿಗಳನ್ನು ವೈಜ್ಞಾನಿಕವಾಗಿ ರೂಪಿಸಲಾಗಿದ್ದು ಒಟ್ಟು 428 ಗಂಟೆಗಳ ಅವಧಿಯದಾಗಿರುತ್ತವೆ. ಇದರಲ್ಲಿ 300 ಗಂಟೆಗಳು ಚರ್ಚೆ ಹಾಗೂ 128 ತರಗತಿಗಳ ಮೌಲ್ಯಮಾಪನ ಮತ್ತು ಪುನರಾವರ್ತನೆ ಒಳಗೊಂಡಿರುತ್ತವೆ ಎಂದರು.

ಸಿಎ ಮತ್ತು ಸಿಎಸ್ ಕೋರ್ಸ್ ಆಕಾಂಕ್ಷಿಗಳು ತಮ್ಮ ವಿಶ್ಲೇಷಣಾತ್ಮಕ ಕೌಶಲ್ಯವನ್ನು ವೃದ್ಧಿಸಿಕೊಳ್ಳುವುದರ ಜೊತೆಗೆ ಪ್ರತಿನಿತ್ಯ ಯೋಜನೆ ರಹಿತವಾಗಿ 16 ರಿಂದ 18 ಗಂಟೆ ಓದುವುದರ ಬದಲಾಗಿ ಯೋಜಿತವಾಗಿ ದಿನಕ್ಕೆ ಒಂದು ಗಂಟೆ ಅಭ್ಯಾಸದಲ್ಲಿ ತೊಡಗಿಕೊಳ್ಳುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು. ಕಾಲೇಜಿನ ಪ್ರಾಚಾರ್ಯೆ ಡಾ. ಕೆ. ಸಾಯಿಲತ, ಬಿಬಿಎ ಮತ್ತು ಬಿಕಾಂ ವಿಭಾಗದ ಮುಖ್ಯಸ್ಥ ಡಾ. ಜಿ.ಎಂ. ಸುದರ್ಶನ್ ಸೇರಿದಂತೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಜೆ. ಸ್ವಾತಿ ಸ್ವಾಗತಿಸಿದರು. ರೂಪಶ್ರೀ ವಂದಿಸಿದರು. ಎ.ಆರ್. ರಶ್ಮಿ ಕಾರ್ಯಕ್ರಮ ನಿರೂಪಿಸಿದರು.

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204

ವಿಜಯ ಕರ್ನಾಟಕ 16.09.2019

# ವೈಫಲ್ಯವೇ ಯಶಸ್ಸಿಗೆ ಅಸ್ತ್ರ



ಶಿವಮೊಗ್ಗದ ಪಿಇಎಸ್ಐಎಎಂಎಸ್ ಕಾಲೇಜಿನಲ್ಲಿ ಸಿಎ ಮತ್ತು ಸಿಎಸ್ ಫೌಂಡೇಶನ್ ಕೋರ್ಸ್‌ಗಳನ್ನು ಪ್ರೊಎಡ್ಜ್ ಸ್ಕಿಲ್ ಡೆವಲಪ್‌ಮೆಂಟ್ ಆ್ಯಂಡ್ ಎಜುಟೆಕ್ ಪ್ರೈ.ಲಿ.ನ ಸಹ ಸಂಸ್ಥಾಪಕ ಶ್ರೀರಾಮ್ ವಂಶಿ ಉದ್ಘಾಟಿಸಿದರು.

**ವಿಕ ಸುದ್ದಿಲೋಕ** ಶಿವಮೊಗ್ಗ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವೈಫಲ್ಯ ಸಾಮಾನ್ಯ. ಮೊದಲ ಪ್ರಯತ್ನದಲ್ಲಿ ಸಿಎ ಹಾಗೂ ಸಿಎಸ್‌ನಂತಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಸುಲಭವಲ್ಲ ಎಂದು ಪ್ರೊಎಡ್ಜ್ ಸ್ಕಿಲ್ ಡೆವಲಪ್‌ಮೆಂಟ್ ಆ್ಯಂಡ್ ಎಜುಟೆಕ್ ಪ್ರೈ.ಲಿ.ನ ಸಹ ಸಂಸ್ಥಾಪಕ ಶ್ರೀರಾಮ್ ವಂಶಿ ಹೇಳಿದರು.

ನಗರದ ಪಿಇಎಸ್ಐಎಎಂಎಸ್ ಕಾಲೇಜಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಿಎ ಮತ್ತು ಸಿಎಸ್ ಫೌಂಡೇಶನ್ ಕೋರ್ಸ್‌ಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನಗಳಲ್ಲಿ ಸಫಲತೆ ಸಿಗದಿದ್ದರೆ ಅಭ್ಯರ್ಥಿಗಳು ಎದೆಗುಂದಬಾರದು. ಹೆದರಿಕೆ ಮತ್ತು ಹಿಂಜರಿಕೆ ಬಿಟ್ಟು ಮುನ್ನುಗ್ಗಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪಿಇಎಸ್ ಟ್ರಸ್ಟ್‌ನ ಮುಖ್ಯ ಆಡಳಿತ ಸಂಯೋಜನಾಧಿಕಾರಿ ಡಾ. ಆರ್. ನಾಗರಾಜ್ ಮಾತನಾಡಿ, ಯಶಸ್ಸು ಸತತ ಪರಿಶ್ರಮದ ಮೂಲಕ ಲಭಿಸುತ್ತದೆ. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಸ್ಫೂರ್ತಿ ಕಳೆದುಕೊಳ್ಳಬಾರದು. ನಿರಂತರ ಪ್ರಯತ್ನ ಶೀಲರಾದ್ದಲ್ಲಿ ಅಂದುಕೊಂಡ ಗುರಿಯನ್ನು ಸಲೀಸಾಗಿ ಸಾಧಿಸಬಹುದು ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ. ಸಾಯಿಲತಾ, ಬಿಬಿಎ ಮತ್ತು ಬಿ.ಕಾಂ ವಿಭಾಗದ ಮುಖ್ಯಸ್ಥ ಡಾ. ಜಿ.ಎಂ. ಸುದರ್ಶನ್, ಬೋಧಕ, ಬೋಧಕೇತರ ಸಿಬ್ಬಂದಿ ಹಾಜರಿದ್ದರು. ಜೆ.ಸ್ವಾತಿ ಸ್ವಾಗತಿಸಿದರು. ಶ್ವೇತ ಪ್ರಾರ್ಥಿಸಿದರು. ರೂಪಶ್ರೀ ವಂದಿಸಿದರು. ಎ.ಆರ್.ರಶ್ಮಿ ನಿರೂಪಿಸಿದರು.

PES INSTITUTE OF ADVANCED MANAGEMENT STUDIES ★ SHIVAMOGGA ★

K.Sailatha

Principal
PES Institute of Advanced Management Studies
NH 206, Sagar Road
SHIVAMOGGA-577 204